**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 25-01-2024.**

**ಪಾಟೀ ಸವಾಲು - ವಾದಿ ಪರ ವಕೀಲರಿಂದ :**

**1)** ನಮ್ಮ ತಂದೆಯ ತಂದೆ ಹೆಸರು ಸುಬ್ಬೇಗೌಡ. ಅವರಿಗೆ ಇಬ್ಬರು ಮಕ್ಕಳು. ಅವರು ನಾರಾಯಣಪ್ಪ ಮತ್ತು ಕೆಂಚಪ್ಪ. ಈ ದಾವೆಯ ವಾದಿಗಳು ಮತ್ತು 2 ರಿಂದ 6 ನೇ ಪ್ರತಿವಾದಿಗಳು ನಾರಾಯಣಪ್ಪ ಅವರ ಮಕ್ಕಳು ಎಂದರೆ ಸರಿ. ನಮ್ಮ ತಾತ ಸುಬ್ಬೇಗೌಡ ಅವರ ಜೀವಿತಾವಧಿಯಲ್ಲಿ ಅವರಿಗೆ ಸೇರಿದ ಸಾಕಷ್ಟು ಆಸ್ತಿಗಳು ಇದ್ದವು ಎಂದರೆ ಸರಿ. ಆ ಸಮಯದಲ್ಲಿ ನಮ್ಮ ತಂದೆ ಮತುತ ಕೆಂಚಪ್ಪ ಅವರ ಪತ್ನಿ ಮುನಿಯಮ್ಮ ರವರ ಮಧ್ಯೆ ಒಟ್ಟು ಕುಟುಂಬದ ಆಸ್ತಿಗಳನ್ನು ಭಾಗ ಮಾಡಿಕೊಂಡರು ಎಂದರೆ ಸರಿ. ಸದರಿ ವಿಭಾಗ ಪತ್ರವನ್ನು ದಿ.21-03-1963 ರಲ್ಲಿ ನೋಂದಣಿ ಮಾಡಿಸಲಾಯಿತು ಎಂದರೆ ಸರಿ. ಸದರಿ ವಿಭಾಗ ಪತ್ರದ ಪ್ರಕಾರ ಈ ದಾವೆಯ ಎಲ್ಲಾ 16 ಷೆಡ್ಯೂಲ್ ಸ್ವತ್ತುಗಳು ನಮ್ಮ ತಂದೆಯ ಹಿಸ್ಸೆಗೆ ಬಂದವು ಎಂದರೆ ಸರಿ. ನಮ್ಮ ತಂದೆಗೆ ಬಂದ ಸದರಿ ಸ್ವತ್ತುಗಳನ್ನು ನಮ್ಮ ತಂದೆ ಮತ್ತು ಅವರ ಮಕ್ಕಳು ಅನುಭವಿಸಿಕೊಂಡು ಬಂದಿರುತ್ತೇವೆ ಎಂದರೆ ಸರಿ. ನಮ್ಮ ತಂದೆ ಮತುತ ಪ್ರತಿವಾದಿ ಸಂಖ್ಯೆ 1(ಎ) ರವರಿಗೆ ನಾವು ಒಟ್ಟು ಎಂಟು ಜನ ಮಕ್ಕಳು. ನಾವು ನಾಲ್ಕು ಜನ ಹೆಣ್ಣು ಮಕ್ಕಳು ಮತ್ತು ನಾಲ್ಕು ಜನ ಗಂಡು ಮಕ್ಕಳು. ಸದರಿ ನಾಲ್ಕು ಜನ ಹೆಣ್ಣು ಮಕ್ಕಳು ಎಂದರೆ 1 ರಿಂದ 3 ನೇ ವಾದಿಗಳು ಮತ್ತು 6 ನೇ ಪ್ರತಿವಾದಿ ಆಗಿರುತ್ತಾರೆ. 2 ರಿಂದ 5 ನೇ ಪ್ರತಿವಾದಿಗಳು ಸದರಿ ನಾಲ್ಕು ಜನ ಗಂಡು ಮಕ್ಕಳು ಆಗಿರುತ್ತೇವೆ. ನಮ್ಮ ತಂದೆಯ ಜೀವಿತಾವಧಿಯಲ್ಲಿ ಅವರು ಅವರ ಎಲ್ಲಾ ಮಕ್ಕಳನ್ನು ಪಾಲನೆ ಪೋಷಣೆ ಮಾಡಿರುತ್ತಾರೆ ಮತ್ತು ವಿದ್ಯಾಭ್ಯಾಸವನ್ನೂ ಸಹ ಮಾಡಿಸಿರುತ್ತಾರೆ. ನಮ್ಮ ತಂದೆ 1998 ರ ಹೊತ್ತಿನಲ್ಲಿ ಎಲ್ಲಾ ಮಕ್ಕಳ ಮದುವೆಯನ್ನು ಮಾಡಿಸಿರುತ್ತಾರೆ ಎಂದರೆ ಸರಿ. 6 ನೇ ಪ್ರತಿವಾದಿಯ ಗಂಡ ಸುಮಾರು ವರ್ಷದ ಹಿಂದೆ ಮರಣ ಹೊಂದಿರುತ್ತಾರೆ ಎಂದರೆ ಸರಿ. 1998 ರ ವರೆಗೆ

ನಮ್ಮ ತಂದೆ ಆರೋಗ್ಯವಾಗಿ ಇದ್ದರು ಹಾಗೂ ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳನ್ನೂ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 1998 ರ ನಂತರ ನಮ್ಮ ತಂದೆಯ ಆರೋಗ್ಯದಲ್ಲಿ ಏರುಪೇರು ಆಗಿ ಕುಟುಂಬದ ವ್ಯವಹಾರಗಳನ್ನು ನಾವು ಗಂಡು ಮಕ್ಕಳು ನೋಡಿಕೊಳ್ಳಲು ಪ್ರಾರಂಭಿಸಿದೆವು ಎಂದರೆ 1990 ರಿಂದಲೇ ಕುಟುಂಬದ ವ್ಯವಹಾರಗಳನ್ನು ನಾವು ವಹಿಸಿಕೊಂಡಿದ್ದೆವು ಎಂದು ನುಡಿಯುತ್ತೇನೆ. ನಮ್ಮ ತಂದೆ ಅವರ ಜೀವಿತಾವಧಿಯಲ್ಲಿ ಅವರ ಎಂಟೂ ಜನ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿರುತ್ತಾರೆ. ಸಾಕ್ಷಿಯು ಮುಂದುವರಿದು ಹೆಣ್ಣು ಮಕ್ಕಳಿಗೆ ಆಸ್ತಿ ನೀಡಿರುವುದಿಲ್ಲ, ಗಂಡು ಮಕ್ಕಳಿಗೆ ನೀಡಿರುತ್ತಾರೆ ಹಾಗೂ ಹೆಣ್ಣು ಮಕ್ಕಳು ಒಪ್ಪಿಗೆ ಸೂಚಿಸಿರುತ್ತಾರೆ ಎಂದು ನುಡಿಯುತ್ತೇನೆ. ಹೆಣ್ಣು ಮಕ್ಕಳು ಸದರಿ ವಿಭಾಗ ಪತ್ರಕ್ಕೆ ಸಹಿ ಮಾಡಿರುವುದಿಲ್ಲ. ತಾವು ಸಹಿ ಮಾಡುವ ಅವಶ್ಯಕತೆ ಇಲ್ಲ ಎಂದು ನುಡಿದಿರುತ್ತಾರೆ. ನಮ್ಮ ತಂದೆ ಹಾಗೂ ಅವರು ಎಂಟು ಜನ ಮಕ್ಕಳ ಮಧ್ಯೆ ಯಾವತ್ತೂ ವಿಭಾಗ ಆಗಿರುವುದಿಲ್ಲ ಹಾಗೂ ಈ ದಾವೆ ಸಲ್ಲಿಸುವವರೆಗೂ ದಾವಾ ಸ್ವತ್ತುಗಳು ಒಟ್ಟು ಕುಟುಂಬದಲ್ಲಿ ಮುಂದುವರೆದಿರುತ್ತವೆ ಎಂದರೆ ಸರಿಯಲ್ಲ. ನಮ್ಮ ತಂದೆ ದಿ.25-08-2012 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ. ಅವರು ಮರಣ ಹೊಂದುವವರೆಗೂ ಮಾನಸಿಕವಾಗಿ ಸ್ವಸ್ಥರಾಗಿದ್ದರು. ನಮ್ಮ ತಂದೆ ಅವರ ಜೀವಿತಾವಧಿಯಲ್ಲಿ ಕೆಲವು ಸ್ವತ್ತುಗಳನ್ನು ತಮ್ಮ ಹೆಣ್ಣು ಮಕ್ಕಳಿಗೆ ನೀಡಬೇಕು ಎಂದು ಬಯಸಿದ್ದರು ಎಂದರೆ ಸರಿಯಲ್ಲ. ಆ ಬಗ್ಗೆ ನಮ್ಮ ತಂದೆ ಭಾಗ ಮಾಡಿ ಹೆಣ್ಣು ಮಕ್ಕಳಿಗೆ ಅವರ ಪಾಲು ಕೊಡಿ ಎಂದು ಗಂಡು ಮಕ್ಕಳಿಗೆ ಒತ್ತಾಯ ಹೇರಿದ್ದರು ಎಂದರೆ ಸರಿಯಲ್ಲ. ನಾವು ಒಂದು ಸುಳ್ಳು ವಿಭಾಗ ಪತ್ರ ಸೃಷ್ಟಿಸಿಕೊಂಡು ಹೆಣ್ಣು ಮಕ್ಕಳನ್ನು ಸೇರಿಸದೇ ನಮ್ಮ ಇಷ್ಟದಂತೆ ಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಬಗ್ಗೆ ಹೆಣ್ಣು ಮಕ್ಕಳಿಗೆ ವಿಚಾರವನ್ನು ತಿಳಿಸಿಲ್ಲ, ಅವರ ಒಪ್ಪಿಗೆಯನ್ನೂ ಪಡೆದಿಲ್ಲ ಹಾಗೂ ಅವರ ಸಹಿಗಳನ್ನೂ ಪಡೆದಿಲ್ಲ ಎಂದರೆ ಸರಿಯಲ್ಲ. ಆದರೆ ಸಹಿಗಳನ್ನು ಪಡೆದಿಲ್ಲ ಎಂದರೆ ಸರಿ. ನಮ್ಮ ಹೆಸರಿನಲ್ಲಿ ಖಾತೆಗಳನ್ನು ಮಾಡಿಕೊಳ್ಳುವಾಗ ನಮ್ಮ ವಂಶವೃಕ್ಷದಲ್ಲಿ

ಹೆಣ್ಣು ಮಕ್ಕಳ ಹೆಸರುಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ಆ ವಿಚಾರವಾಗಿ ಹೆಣ್ಣು ಮಕ್ಕಳು ಸುಮಾರು ಬಾರಿ ನಮ್ಮ ತಂದೆಯನ್ನು ಸಂಪರ್ಕಿಸಿ ನಮ್ಮ ಭಾಗ ಕೊಡಿ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಮ್ಮ ತಂದೆ ತನ್ನನ್ನು ಮೂಲೆಗುಂಪು ಮಾಡಿದ್ದಾರೆ, ಏನೂ ಮಾಡಲು ಸಾಧ್ಯವಿಲ್ಲ ಎಂದು ಅವರ ಅಸಹಾಯಕತೆಯನ್ನು ತೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ತದನಂತರ 2004 ರಲ್ಲಿ ವಾದಿಗಳು ಬಂದು ತಮ್ಮ ಆಸ್ತಿಯನ್ನು ತಮಗೆ ಕೊಡಿ ಎಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಬಗ್ಗೆ ಸುಮಾರು ಬಾರಿ ನ್ಯಾಯ ಪಂಚಾಯಿತಿ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಒಟ್ಟು ಕುಟುಂಬದ ಆಸ್ತಿಯಲ್ಲಿ ಒಂದು ಗುಂಟೆಯನ್ನೂ ಕೊಡುವುದಿಲ್ಲ ಎಂದು ಹೆಣ್ಣು ಮಕ್ಕಳ ಕೋರಿಕೆಯನ್ನು ತಿರಸ್ಕರಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಸೆಪ್ಟೆಂಬರ್ 2006 ರ ಕೊನೆಯ ವಾರದಲ್ಲಿ ದಾವಾ ಸ್ವತ್ತುಗಳಲ್ಲಿ ಒಂದು ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿ. ಆ ಸಂದರ್ಭದಲ್ಲಿ ಖರೀದಿದಾರರು ದಾವಾ ಸ್ವತ್ತಿನಲ್ಲಿ ಅಳತೆ ಮಾಡುತ್ತಿರುವಾಗ ನಾವು ಮಾರಾಟ ಮಾಡುತ್ತಿರುವ ವಿಚಾರ ಹೆಣ್ಣು ಮಕ್ಕಳಿಗೆ ತಿಳಿದುಬಂತು ಎಂದರೆ ಸರಿಯಲ್ಲ. ಹೆಣ್ಣು ಮಕ್ಕಳು ನಮ್ಮ ಬಗ್ಗೆ ಅನುಮಾನಗೊಂಡು ಕಂದಾಯ ದಾಖಲೆಗಳನ್ನು ಪಡೆದುಕೊಂಡಾಗ ನಮ್ಮ ಹೆಸರಿನಲ್ಲಿ ನಾವು ಖಾತೆ ಮಾಡಿಸಿಕೊಂಡ ವಿಚಾರ ಅವರಿಗೆ ಮೊಟ್ಟಮೊದಲು ತಿಳಿದುಬಂತು ಎಂದರೆ ಸರಿಯಲ್ಲ. ಆ ನಂತರ ಹೆಣ್ಣು ಮಕ್ಕಳು ಕೊನೆಯ ಬಾರಿ 2006 ಸೆಪ್ಟೆಂಬರ್ ತಿಂಗಳಲ್ಲೇ ನಮ್ಮನ್ನು ಸಂಪರ್ಕಿಸಿ ಆಸ್ತಿಗಳಲ್ಲಿ ತಮ್ಮ ಭಾಗ ನೀಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯ ಎಲ್ಲಾ ದಾವಾ ಸ್ವತ್ತುಗಳು ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ನಿ.ಪಿ.7 ಮ್ಯುಟೇಶನ್ ಎಂಟ್ರಿಯನ್ನು ನಾವು ಗಂಡುಮಕ್ಕಳು ಕಂದಾಯ ಅಧಿಕಾರಿಗಳ ಜೊತೆಯಲ್ಲಿ ಸೇರಿ ಹೆಣ್ಣು ಮಕ್ಕಳಿಗೆ ಮೋಸ ಮಾಡುವ ಉದ್ದೇಶದಿಂದ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.7 ರ ಪ್ರಕಾರ ನಮ್ಮ ತಂದೆಯ ಹಿಸ್ಸೆಗೆ ಸರ್ವೆ ನಂಬರ್ 5-3 ರಲ್ಲಿ 15 ಗುಂಟೆ ಹಾಗೂ 17-1 ರಲ್ಲಿ 6 ಗುಂಟೆ ಎಂದು ತೋರಿಸಿರುತ್ತೇವೆ ಎಂದರೆ ಸರಿ. ಸದರಿ

ದಾಖಲೆಯ ಪ್ರಕಾರ ನಮ್ಮ ಸಹೋದರಿಯರಿಗೆ ಕುಟುಂಬದ ಸ್ವತ್ತುಗಳಲ್ಲಿ ಯಾವುದೇ ಜಮೀನನ್ನು ನೀಡಿರುವುದಿಲ್ಲ. ನಿ.ಪಿ.7 ರಲ್ಲಿ ನಾರಾಯಣಪ್ಪ ಅವರಿಗೆ ಹೆಣ್ಣು ಮಕ್ಕಳು ಇದ್ದಾರೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾವು ಉದ್ದೇಶಪೂರ್ವಕವಾಗಿ ಹೆಣ್ಣು ಮಕ್ಕಳ ಹೆಸರನ್ನು ತೋರಿಸಿರುವುದಿಲ್ಲ ಎಂದರೆ ಹೆಣ್ಣು ಮಕ್ಕಳು ಒಪ್ಪಿ ಕೊಂಡಿರುವುದರಿಂದ ತೋರಿಸಿರುವುದಿಲ್ಲ ಎಂದು ನುಡಿಯುತ್ತೇನೆ. 2005-06 ನೇ ಸಾಲಿನಲ್ಲಿ ನಿ.ಪಿ.3 ರಂತೆ ಸರ್ವೆ ಸಂಖ್ಯೆ 35 ನಮ್ಮ ತಂದೆಯ ಹೆಸರಿನಲ್ಲಿ ಇದ್ದವು ಎಂದರೆ ಸರಿ. ನಿ.ಪಿ.4 ರ ಪ್ರಕಾರ ಸಹ ಸದರಿ ಸ್ವತ್ತು ನಮ್ಮ ತಂದೆಯ ಹೆಸರಿನಲ್ಲೇ ಇದೆ ಎಂದರೆ ಸರಿ. ಸದರಿ ದಾಖಲೆಗಳ ಪ್ರಕಾರ ದಿ.09-10-2006 ರಲ್ಲಿ ಸದರಿ ಸ್ವತ್ತು ನಾರಾಯಣಪ್ಪ ಅವರ ಹೆಸರಿನಲ್ಲಿ ಇವೆ ಎಂದರೆ ಸರಿ. ನಿ.ಪಿ.5, 6 ರ ಪ್ರಕಾರ ಸಹ ಸದರಿ ಸ್ವತ್ತುಗಳು ನಾರಾಯಣಪ್ಪ ಅವರ ಹೆಸರಿನಲ್ಲಿ ಇವೆ ಎಂದರೆ ಸರಿ. ನಾನು 1 ಎಕರೆ ಚಿಲ್ಲರೆ ಜಮೀನನ್ನು ಮಾರಾಟ ಮಾಡಿದ್ದು ಸರಿಯಾದ ವಿಸ್ತೀರ್ಣ ನೆನಪಿಲ್ಲ. ನಾನು ಸರ್ವೆ ಸಂಖ್ಯೆ 69-5 ರಲ್ಲಿ 30 ಗುಂಟೆ ಜಮೀನನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ. ಹಾಗೆ ಮಾರಾಟ ಮಾಡುವಾಗ ನಾನು ಹೆಣ್ಣು ಮಕ್ಕಳಿಗೆ ತಿಳಿಸಿರುವುದಿಲ್ಲ ಎಂದರೆ ಸರಿ. ಸದರಿ ಕ್ರಯಪತ್ರಕ್ಕೆ ಯಾವ ಹೆಣ್ಣು ಮಕ್ಕಳೂ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿ.ಡಿ.1 ರಿಂದ ನಿ.ಡಿ.93 ಪಹಣಿ ಪತ್ರಿಕೆಗಳು ಬದಲಾವಣೆ ಆಗಿರುವುದು ಈ ದಾವೆ ಸಲ್ಲಿಸಿದ ನಂತರ ಎಂದರೆ ಸರಿಯಲ್ಲ. ಈ ದಾವೆ ದಾಖಲಿಸಿದ ನಂತರ ನಾವು ನಮ್ಮ ಹೆಸರಿಗೆ ಹಳೆಯ ಖಾತೆ ಆಗಿದೆ ಎಂದು ಸುಳ್ಳು ಹೇಳಿ ಪಹಣಿ ಪತ್ರಿಕೆಗಳನ್ನು ಬದಲಾಯಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿ.ಡಿ.96 ರಲ್ಲಿ ಹೆಣ್ಣು ಮಕ್ಕಳು ಸಹಿ ಮಾಡಿರುವುದಿಲ್ಲ ಹಾಗೂ ತಮಗೆ ಸಮ್ಮತಿ ಇದೆ ಎಂದು ಹೇಳಿರುತ್ತಾರೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ನಿ.ಡಿ.96 ನ್ನು ನಾವು ನಮಗೆ ಅನುಕೂಲವಾಗುವಂತೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಒಟ್ಟು ಕುಟುಂಬದ ಆಸ್ತಿಗಳಲ್ಲಿ ಹೆಣ್ಣು ಮಕ್ಕಳ ಹಕ್ಕನ್ನು ಕಸಿದುಕೊಳ್ಳುವ ಉದ್ದೇಶದಿಂದ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿ.ಡಿ.96 ನ್ನು ನೋಂದಣಿ

ಮಾಡಿಸಿಕೊಳ್ಳಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ಊರಿನ ಪಂಚಾಯಿತಿ ಯಲ್ಲಿ ಮಾಡಿಸಿಕೊಂಡಿದ್ದೇವೆ ಎಂದು ನುಡಿಯುತ್ತೇನೆ.

**(ವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**